


# ಅಚ್ಚಳಿಯದ ಸಿಜಿಕೆ ನೆನಪು



## ಸಿಜಿಕೆ ರಾಷ್ಟ್ರೀಯ ರಂಗೋತ್ಸವ 2018







**ಇದೇ ಏಪ್ರಿಲ್ 28ರಿಂದ ಮೇ 4ರವರೆಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿದೆ. ದೇಶದ ವಿವಿಧ ಭಾಗದ ವಿಭಿನ್ನ ರಂಗಪ್ರಯೋಗಗಳ ಪ್ರದರ್ಶನದ ಜೊತೆಗೆ ಸಂವಾದ, ಕಿರುಚಿತ್ರ ಪ್ರದರ್ಶನ ಇದರ ವಿಶೇಷ.**

■ **ದಿಲಾವರ್ ರಾಮದುರ್ಗ**

ಸಿಜಿಕೆ ಎಂದರೆ ನೆನಪಾಗುವುದು ಬದ್ಧತೆಯ ರಂಗಭೂಮಿ. ಮನರಂಜನೆಯ ಏಕೋದ್ದೇಶದ ಚಟುವಟಿಕೆಯಾಚೆಗೆ ಸಾಂಸ್ಕೃತಿಕ. ಸಾಮಾಜಿಕ ಬದ್ಧತೆಯನ್ನು ಮತ್ತದರ ಮಹತ್ವವನ್ನು ರಂಗದ ನೆಲೆಯಲ್ಲಿ ವಿಸ್ತರಿಸಿದ ಕೆಲವೇ ಪ್ರಾತಃಸ್ಮರಣೀಯರಲ್ಲಿ ಸಿ.ಜಿ. ಕೃಷ್ಣಸ್ವಾಮಿ ಅಚ್ಚಳಿಯದ ಹೆಸರು.

ಸ್ವಂತದ ದೈಹಿಕ ಸಮಸ್ಯೆಯನ್ನು ಬದಿಗಿರಿಸಿ ಸಮಾಜ ಮುಗ್ಗರಿಸಿದಾಗೆಲ್ಲ ಅದನ್ನು ತಿದ್ದಿ ನೆಟ್ಟಗೆ ನಿಲ್ಲಿಸುವ ಬಹುಯತ್ನಗಳಲ್ಲಿ ಇವರ ಪಾಲು ದೊಡ್ಡದಿದೆ. ಕಲಾಕ್ಷೇತ್ರದ ಪ್ರತಿಯೊಂದು ಸಾಂಸ್ಕೃತಿಕ ಯತ್ನಗಳಲ್ಲಿ ಇವರ ಪ್ರತಿಭೆ, ಕಾಳಜಿ ಮುಂಚೂಣಿಯಲ್ಲಿ ನಿಂತು ಕೆಲಸ ಮಾಡಿದೆ. ತಾವು ಬೆಳೆದು ಹೆಮ್ಮರವಾಗುವ ಸ್ವಾರ್ಥ ಬಿಟ್ಟು ತಮ್ಮಂಥ ಕಾಳಜಿಯ ದೊಡ್ಡ ಪಡೆ ರೂಪಿಸುವ ಹಂಬಲ ಅವರನ್ನು ಯಶಸ್ವಿ, ಕ್ರಿಯಾಶೀಲ ರಂಗಕರ್ಮಿ ಮತ್ತು ಚಿಂತಕನನ್ನಾಗಿಸಿತ್ತು.

ಅವರ ಗರಡಿಯಲ್ಲಿ ಅದೆಷ್ಟು ಪ್ರತಿಭೆಗಳು ಬೆಳಕಿಗೆ ಬಂದವು. ಇವತ್ತು ರಂಗಭೂಮಿಯಲ್ಲಿ ಅತ್ಯಂತ ಕ್ರಿಯಾಶೀಲ ಮತ್ತು ದೊಡ್ಡ ಹೆಸರು ಮಾಡಿರುವ ನಟ, ನಿರ್ದೇಶಕರು, ತಂತ್ರಜ್ಞರು, ವಿನ್ಯಾಸಗಾರರು ಸಿಜಿಕೆ ಅವರಿಂದ ಪ್ರಭಾವಿತರೇ. ಅವರಿಂದ ಸ್ಫೂರ್ತಿ ಮತ್ತು ತರಬೇತಿಯನ್ನು ಪಡೆದ ನಾಡಿನ ಅನೇಕರಿಗೆ ರಂಗಭೂಮಿಯ ವಿಶ್ವವಿದ್ಯಾಲಯವೇ ಆಗಿದ್ದವರು ಸಿಜಿಕೆ.

ಸಾಣೆಹಳ್ಳಿಯಲ್ಲಿ ಇವರ ನಿರ್ದೇಶನದಲ್ಲಿ ರೂಪಿಸಿದ ರಂಗಭೂಮಿ ಗ್ರೀಕ್ ಕಾಲದ ಥಿಯೇಟರ್ ಅನ್ನು ನೆನಪಿಸುವಂತಿದೆ. ಅನೇಕ ರೆಪರ್ಟರಿಗಳು, ರಂಗ ತಂಡಗಳು ಇವರಿಂದ ಮಾರ್ಗದರ್ಶನ ಪಡೆದಿವೆ. ನಾಟಕ ಅಕಾಡೆಮಿ, ಸಮುದಾಯ ಸಂಘಟನೆ, ಲಲಿತ ಕಲಾರಂಗ ಮತ್ತು ಒಟ್ಟು ಸಾಂಸ್ಕೃತಿಕ ವಲಯಕ್ಕೆ ಅತ್ಯಂತ ನಿಕಟರಾಗಿದ್ದವರು ಸಿಜಿಕೆ. ಅವರು ಬದುಕಿನ ರಂಗ ತೊರೆದು ವರ್ಷಗಳೇ ಕಳೆದಿವೆ.

ಅವರ ಸ್ಮರಣಾರ್ಥ 'ರಂಗನಿರಂತರ' ತಂಡ ಪ್ರತಿ ವರ್ಷ 'ಸಿಜಿಕೆ ರಾಷ್ಟ್ರೀಯ ನಾಟಕೋತ್ಸವ' ಆಯೋಜಿಸುತ್ತ ಬಂದಿದೆ. ನಾಡಿನ ಮತ್ತು ದೇಶದ ವಿವಿಧ ಮೂಲೆಗಳಿಂದ ಉತ್ಕೃಷ್ಟ ನಾಟಕಗಳನ್ನು ನಾಡಿನ ಪ್ರೇಕ್ಷಕರಿಗೆ ದರ್ಶನ ಮಾಡಿಸುವ ಬಹುಮುಖ್ಯವಾದ ರಂಗ ಜವಾಬ್ದಾರಿಯನ್ನು ಈ ಮೂಲಕ ನಿಭಾಯಿಸುತ್ತಿದೆ. ಬಂಗಾಳಿ, ತಮಿಳು, ಹಿಂದಿ, ಇಂಗ್ಲಿಷ್ ಮತ್ತಿತರ ಭಾಷೆಗಳ ನಾಟಕಗಳ ಜೊತೆ ಕನ್ನಡದ ಪ್ರಮುಖ ನಾಟಕಗಳನ್ನು ಪ್ರೇಕ್ಷಕರಿಗೆ ಉಣಬಡಿಸುವ ಪ್ರಯತ್ನ ಈ ಸಲವೂ ನಡೆಯಲಿದೆ.

ಇದೇ ಏಪ್ರಿಲ್ 28ರಿಂದ ಒಂದು ವಾರ ಕಾಲ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರತಿ ದಿನ, ಸಂಜೆ 4 30ರಿಂದ 6.30ರವರೆಗೆ ಕಿರು ಚಲನಚಿತ್ರೋತ್ಸವ, ಸಂವಾದ, ಕಥೆ ಹೇಳುವ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಸಂಜೆ 7ರಿಂದ ಪ್ರತಿದಿನ ಹೆಸರಾಂತ ನಾಟಕಗಳ ಪ್ರದರ್ಶನ ನಡೆಯಲಿವೆ.

'ರಂಗಾಸಕ್ತರು ಮತ್ತು ಸಹೃದಯರ ನೆರವಿನಿಂದಲೇ ಇದೆಲ್ಲ ಸಾಧ್ಯವಾಗುತ್ತಿದೆ. ಒಂದು ವಾರ ಕಾಲ ನಡೆಯುವ ಈ ರಾಷ್ಟ್ರೀಯ ಉತ್ಸವಕ್ಕೆ ಕನಿಷ್ಠ 20ರಿಂದ 25 ಲಕ್ಷ ರೂಪಾಯಿ ಖರ್ಚು ವೆಚ್ಚವಾಗುವ ಅಂದಾಜಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರೋತ್ಸಾಹ ನೀಡಿದೆ. ಇಲಾಖೆಯ ನಿರ್ದೇಶಕ ವಿಶು ಕುಮಾರ್ ಸೂಕ್ತವಾಗಿ ಸ್ಪಂದಿಸಿದ್ದಾರೆ. ಉಳಿದ ಹೆಚ್ಚುವರಿ ಖರ್ಚನ್ನು ಪ್ರಾಯೋಜಕರ ಮೂಲಕ ವ್ಯವಸ್ಥೆ ಮಾಡುವ ಪ್ರಯತ್ನ ನಡೆಯುತ್ತಿದೆ' ಎನ್ನುತ್ತಾರೆ ಉತ್ಸವದ ನೇತೃತ್ವ ವಹಿಸಿರುವ ಹೆಸರಾಂತ ರಂಗವಿನ್ಯಾಸಕಾರ ಶಶಿಧರ ಅಡಪ.

ಡಿ.ಕೆ. ಚೌಟ, ಅಪ್ಪಯ್ಯ, ಜೆ. ಲೋಕೇಶ್, ಶಶಿಧರ ಬಾರಿಘಾಟ್, ಕೆವೈಎನ್, ರಾಮಕೃಷ್ಣ ಬೆಳ್ತೂರ್, ಜಿಪಿಓ ಚಂದ್ರು, ರವಿ, ಸರ್ವೇಶ, ಕಿರಣ್, ಗೋವಿಂದಸ್ವಾಮಿ, ಎಚ್.ಎಲ್. ಪುಷ್ಪ, ಕೃಷ್ಣ ರಾಯಚೂರು, ವಿನೋದ್, ತಾಯ್ ಲೋಕೇಶ್, ರಾಮಕೃಷ್ಣ ಬಿ ಜಿ, ಕೀರ್ತಿ, ಸೋಮಣ್ಣ, ಮುರುಡಯ್ಯ, ರಾಜಗುರು, ರಶ್ಮಿ, ಗೀತಾ, ಸಂಧ್ಯಾ, ಭಾರತಿ ಮತ್ತಿತರ ಹಲವಾರು ಸಾಂಸ್ಕೃತಿಕ ಕಾಳಜಿಯ ಮನಸುಗಳು ಈ ಸಾಂಘಿಕ ಯತ್ನದಲ್ಲಿ ಕೈಜೋಡಿಸಿವೆ. ●